ನಂ.1 ಕನ್ನಡ ದಿನಪತ್ರಿಕೆ ವಿಜಯವಾಣಿ

www.vijayavani.net

2

# ನಮಸ್ತೆ ವಿಜಯಪುರ

VIJAYAVANI
» VIJAYAPURA

ನಂ.1 ಕನ್ನಡ ದಿನಪತ್ರಿಕೆ ವಿಜಯವಾಣಿ

ಮಂಗಳವಾರ 26 ಮೇ 2026 »
» 26 MAY 2026


**ಮಾತು ಮಾಣಿಕ್ಯ**

ನಮ್ಮ ಜೀವನದ ಉದ್ದದ ಬಗ್ಗೆ
ನಾವೇನೂ ಮಾಡಲಾರೆವು.
ಅಗಲ ಮತ್ತು ಆಳವನ್ನು
ನಾವೇ ಸೃಷ್ಟಿಸಿಕೊಳ್ಳಬಲ್ಲೆವು!



ಬಿತ್ತನೆ ಬೀಜ ಮತ್ತು ರಸಗೊಬ್ಬರ ಹೆಚ್ಚಿನ ದರಕ್ಕೆ ಮಾರಾಟ ಮಾಡುವ ಮಳಿಗೆಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಮುದ್ದೇಬಿಹಾಳದ ಕೃಷಿ ಇಲಾಖೆಯ ತಾಂತ್ರಿಕ ಅಧಿಕಾರಿ ರಾಜೇಶ್ವರಿ ನಾಡಗೌಡ ಅವರಿಗೆ ರೈತ ಸಂಘದ ಮುಖಂಡರು ಮನವಿ ಸಲ್ಲಿಸಿದರು. ಅಯ್ಯಪ್ಪ ಬಿದರಕುಂದಿ, ಪ್ರಧಾನ ಕಾರ್ಯದರ್ಶಿ ವೈ. ಎಲ್. ಬಿರಾದಾರ, ಸಂಘಟನಾ ಕಾರ್ಯದರ್ಶಿ ಹುಲ್ಲಗಪ್ಪಗೌಡ ಬಿರಾದಾರ ಮತ್ತಿತರರಿದ್ದರು.

## ನಾಳೆ ಆನ್‌ಲೈನ್‌ನಿಂದಾಗುವ ತೊಂದರೆ ಖಂಡಿಸಿ ಪ್ರತಿಭಟನೆ

**ಬಸವನಬಾಗೇವಾಡಿ :** ನೋಂದಣಿ ಇಲಾಖೆಯಲ್ಲಿ ಪೇಪರ್‌ಲೆಸ್ ವ್ಯವಸ್ಥೆ ಹಾಗೂ ಆನ್‌ಲೈನ್ ವ್ಯವಸ್ಥೆಯಲ್ಲಿ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ಕುರಿತು ಮೇ 27ರಂದು ಪ್ರತಿಭಟನೆ ನಡೆಯಲಿದೆ.

ವಿಜಯಪುರ ಜಿಲ್ಲೆಯ ಬಸವನ ಬಾಗೇವಾಡಿ, ಕೊಲ್ಹಾರ, ನಿಡಗುಂದಿ ತಾಲೂಕಿನ ಅಧಿಕೃತ ದಸ್ತು ಬರಹಗಾರರ ಕ್ಷೇಮಾಭಿವೃದ್ಧಿ ಟ್ರಸ್ಟ್ ವತಿಯಿಂದ ಮೇ 27ರಂದು ಪಟ್ಟಣದ ಬಸವೇಶ್ವರ ದೇವಸ್ಥಾನದಿಂದ ತಹಸೀಲ್ದಾರ್ ಕಚೇರಿಯವರೆಗೆ ಕರ್ನಾಟಕ ಸರ್ಕಾರದ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಿಂದ ಜಾರಿಗೆ ತರುತ್ತಿರುವ ಪೇಪರ್‌ಲೆಸ್ ವ್ಯವಸ್ಥೆ ಮತ್ತು ಈಗಿನ ಆನ್‌ಲೈನ್ ನೋಂದಣಿಯಿಂದ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗಳ ಕುರಿತು ಅಖಂಡ ಕರ್ನಾಟಕ ರೈತ ಸಂಘ, ಕರ್ನಾಟಕ ರಕ್ಷಣಾ ವೇದಿಕೆ ಮತ್ತು ಎಲ್ಲ ಸಾರ್ವಜನಿಕರ, ರೈತ ಮುಖಂಡರ ಸಹಕಾರದೊಂದಿಗೆ ಶಾಂತಿಯುತ ಪ್ರತಿಭಟನೆ ಮತ್ತು ಸರ್ಕಾರಕ್ಕೆ ಮನವಿ ಸಲ್ಲಿಸಲಾಗುತ್ತದೆ.

ಈ ಪ್ರತಿಭಟನೆಯಲ್ಲಿ ಬಸವನ ಬಾಗೇವಾಡಿ, ನಿಡಗುಂದಿ, ಕೊಲ್ಹಾರ ತಾಲೂಕಿನ ಎಲ್ಲ ರೈತರು ಪಾಲ್ಗೊಳ್ಳಲಿದ್ದಾರೆ ಎಂದು ದಸ್ತು ಬರಹಗಾರರ ಕ್ಷೇಮಾಭಿವೃದ್ಧಿ ಟ್ರಸ್ಟ್ ತಾಲೂಕು ಅಧ್ಯಕ್ಷ ಸುರೇಶ ಹಾರಿವಾಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಎಎಸ್‌ಪಿ ರಾಮನಗೌಡ ಹಟ್ಟಿ ಸೂಚನೆ | ಪಶುಪಾಲನಾ, ಪಶುವೈದ್ಯ ಇಲಾಖೆ ಸಹಯೋಗದಲ್ಲಿ ಬಕ್ರೀದ್ ಹಿನ್ನೆಲೆ ಸಭೆ

# ಅನಧಿಕೃತ ಜಾನುವಾರು ಸಾಗಣೆ ತಡೆಗಟ್ಟಿ

■ **ವಿಜಯವಾಣಿ ಸುದ್ದಿಜಾಲ** ವಿಜಯಪುರ

ಬಕ್ರೀದ್ ಹಬ್ಬದ ಹಿನ್ನೆಲೆಯಲ್ಲಿ ಜಿಲ್ಲೆಯಾದ್ಯಂತ ಚೆಕ್ ಪೋಸ್ಟ್‌ಗಳಲ್ಲಿ ಅನಧಿಕೃತವಾಗಿ ಜಾನುವಾರು ಸಾಗಣೆಯಾಗದಂತೆ ಅಧಿಕಾರಿಗಳು ತೀವ್ರ ನಿಗಾ ವಹಿಸಬೇಕು ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ರಾಮಗೌಡ ಹಟ್ಟಿ ಹೇಳಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯ ಸಹಯೋಗದಲ್ಲಿ ಸೋಮವಾರ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ದಾಖಲೆಗಳಿಲ್ಲದೆ ಜಾನುವಾರು ಸಾಗಣೆ ಮಾಡುವುದು ಕಾನೂನಿನ ವಿರುದ್ಧವಾಗಿದೆ. ಹಾಗಾಗಿ ಅಕ್ರಮವಾಗಿ ಜಾನುವಾರು ಸಾಗಣೆಯಾಗದಂತೆ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದರು.

ಜಾನುವಾರು ಖರೀದಿ ಹಾಗೂ ಮಾರಾಟ ಮಾಡುವ ವೇಳೆ ಜಾನುವಾರುವಿಗೆ ಕಿವಿಯೋಲೆ ಇರುವುದು ಕಡ್ಡಾಯ. ಸಾಗಾಣಿಕೆ ಸಂಬಂಧಪಟ್ಟಂತೆ ಸಂಬಂಧಪಟ್ಟ ಅಧಿಕಾರಿಗಳಿಂದ ದೃಢೀಕರಣ ಪತ್ರ ಕಡ್ಡಾಯವಾಗಿದೆ. ಎಲ್ಲ ಜಾನುವಾರು ಮಾಲೀಕರಿಗೆ ಮನವೊಲಿಸಿ ಕಿವಿಯೋಲೆ ಹಾಕುವ ಪ್ರಕ್ರಿಯೆ ಜಾರಿಯಲ್ಲಿದೆ ಎಂದರು.

ಬಕ್ರೀದ್ ಹಬ್ಬದ ಮುನ್ನಾ ದಿನವಾದ ಮೇ 27 ಹಾಗೂ ಮೇ 28ರಂದು ಜಾನುವಾರು ಅಕ್ರಮ ವಧೆ ಹಾಗೂ ಸಾಗಣೆ ತಡೆಗಟ್ಟಲು ನಗರಪಾಲಿಕೆ, ಪಶುಪಾಲನಾ ಇಲಾಖೆ, ಪೊಲೀಸ್ ಇಲಾಖೆ ಅಧಿಕಾರಿಗಳ ತಂಡ ರಚಿಸಿ ಎಲ್ಲ ರೀತಿಯ ಮುನ್ನೆಚ್ಚರಿಕೆ ಕ್ರಮಕೈಗೊಳ್ಳಬೇಕು. ಈ ನಿಟ್ಟಿನಲ್ಲಿ ಮಹಾನಗರ ಪಾಲಿಕೆ ಆಯುಕ್ತರು ತಂಡಗಳನ್ನು ರಚಿಸಿ ಅದರ ಮೇಲುಸ್ತುವಾರಿ ವಹಿಸಿಕೊಳ್ಳಬೇಕು ಎಂದು ಅವರು ಸಭೆಗೆ ತಿಳಿಸಿದರು.



ವಿಜಯಪುರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಪ್ರಾಣಿ ಕಲ್ಯಾಣ ಮಂಡಳಿಯಿಂದ ಕರಪತ್ರಗಳನ್ನು ಬಿಡುಗಡೆಗೊಳಿಸಲಾಯಿತು. ಎಎಸ್‌ಪಿ ರಾಮಗೌಡ ಹಟ್ಟಿ, ಅಪರ ಜಿಲ್ಲಾಧಿಕಾರಿ ಡಾ. ಔದ್ರಾಮ್, ಡಾ. ಪ್ರಲ್ಹಾದ್ ಪಾಟೀಲ, ಡಾ. ಸುಜಾತಾ, ಡಾ. ಶಿವಾನಂದ ಮೇಟಿ ಇತರರಿದ್ದಾರೆ.

ಅಪರ ಜಿಲ್ಲಾಧಿಕಾರಿ ಡಾ. ಔದ್ರಾಮ್ ಮಾತನಾಡಿ, ಜಿಲ್ಲೆಯ ತಾಲೂಕು ವ್ಯಾಪ್ತಿಯಲ್ಲಿರುವ ತಹಸೀಲ್ದಾರ್ ನೇತೃತ್ವದಲ್ಲಿ ನಗರ, ಪುರಸಭೆ, ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಸಂಬಂಧಪಟ್ಟ ಆಯುಕ್ತರು ಹಾಗೂ ಮುಖ್ಯ ಅಧಿಕಾರಿಗಳ ನೇತೃತ್ವದಲ್ಲಿ, ಪಶು ಸಂಗೋಪನಾ ಇಲಾಖೆ ಮತ್ತು ಪೊಲೀಸ್ ಇಲಾಖೆ ಅಧಿಕಾರಿ ಹಾಗೂ ಸಿಬ್ಬಂದಿಯನ್ನು ಒಳಗೊಂಡಂತೆ ತಂಡಗಳನ್ನು ರಚಿಸಿ ಕಾರ್ಯಾಚರಣೆ ನಡೆಸಬೇಕು. ತಿಡಗುಂದಿ ಟೋಲ್ ಗೇಟ್, ಧೂಳಖೇಡ, ಸೊಲ್ಲಾಪುರ ನಾಕಾ ಹಾಗೂ ಜಮಖಂಡಿ ನಾಕಾಗಳಲ್ಲಿ ಹೆಚ್ಚುವರಿ ತಂಡಗಳನ್ನು ರಚಿಸಬೇಕು ಎಂದು ಸೂಚಿಸಿದರು.

ಒಂದು ವೇಳೆ ವಶಪಡಿಸಿಕೊಂಡ ಗೋವುಗಳನ್ನು ತಕ್ಷಣ ಹತ್ತಿರದ ಗೋ ಶಾಲೆಗಳಿಗೆ ಹಸ್ತಾಂತರಿಲು ಕ್ರಮ ವಹಿಸಬೇಕು. ಪಶು ಸಂಗೋಪನಾ ಇಲಾಖೆಯಲ್ಲಿ ವಾಹನಗಳ ಕೊರತೆ ಇದ್ದು ಈ ಸಂದರ್ಭದಲ್ಲಿ ಪ್ರತಿ ತಂಡಕ್ಕೆ ಒಂದರಂತೆ ವಾಹನಗಳನ್ನು ಒದಗಿಸಲು ಸಾರಿಗೆ ಇಲಾಖೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಯಿತು.

ಅನಧಿಕೃತವಾಗಿ ಜಾನುವಾರು ಸಾಗಣೆ ಮಾಡುವ ವಾಹನಗಳ ನೋಂದಣಿ ರದ್ದುಪಡಿಸಬೇಕು. ಕರ್ನಾಟಕ ಜಾನುವಾರು ಹತ್ಯೆ ಪ್ರಬಂಧಕ ಮತ್ತು ಸಂರಕ್ಷಣಾ ಕಾಯ್ದೆಯನ್ವಯ ಯಾವುದೇ ರೀತಿಯ ಜಾನುವಾರು ಎಲ್ಲ ವಯಸ್ಸಿನ ಆಕಳು, ಆಕಳ ಕರು, ಹೋರಿ, ಎತ್ತು ಅಲ್ಲದೆ 13 ವರ್ಷದೊಳಗಿನ ಎಮ್ಮೆ ಕೋಣಗಳನ್ನು ಹತ್ಯೆ ಮಾಡುವಂತಿಲ್ಲ. ಉಚ್ಚ ನ್ಯಾಯಾಲಯದ ಆದೇಶದನ್ವಯ ಒಂಟೆಗಳನ್ನು ಕೂಡ ಬಕ್ರೀದ್ ಸಂದರ್ಭದಲ್ಲಿ ಹತ್ಯೆ ಮಾಡುವಂತಿಲ್ಲ. ಬಕ್ರೀದ್ ಹಿನ್ನೆಲೆಯಲ್ಲಿ ಜಾನುವಾರು ಅಕ್ರಮ ಸಾಗಣೆ ಹಾಗೂ ವಧೆಗಳ ಬಗ್ಗೆ ಸಾರ್ವಜನಿಕರು ಜಿಲ್ಲಾಡಳಿತಕ್ಕೆ ಇಲ್ಲವೇ ಹತ್ತಿರ ಪೊಲೀಸ್ ಠಾಣೆಗಳಲ್ಲಿ ದೂರು ದಾಖಲಿಸಬೇಕು ಎಂದರು.

ಪ್ರಾಣಿ ಕಲ್ಯಾಣ ಮಂಡಳಿಯು ಭಾರತದ ಪ್ರಾಣಿ ಕಲ್ಯಾಣ ಮತ್ತು ಸಂರಕ್ಷಣಾ ಕಾನೂನು, ಪ್ರಾಣಿಗಳ ಜನನ ನಿಯಂತ್ರಣ ನಿಯಮ -2023 ಹಾಗೂ ಭಾರತದಲ್ಲಿ ತಿಳಿದಿರಲೇಬೇಕಾದಂಥಹ ಪ್ರಾಣಿಗಳ ಕಾನೂನು ಕುರಿತು ಕರ ಪತ್ರಗಳನ್ನು ಬಿಡುಗಡೆಗೊಳಿಸಲಾಯಿತು.

ಪ್ರಭಾರಿ ಉಪ ನಿರ್ದೇಶಕ ಡಾ. ಪ್ರಲ್ಹಾದ್ ಪಾಟೀಲ, ಮುಖ್ಯ ಪಶು ವೈದ್ಯಾಧಿಕಾರಿ ಡಾ. ಸುಜಾತಾ, ಡಾ. ಶಿವಾನಂದ ಮೇಟಿ, ಡಾ. ಯು.ಜೆ. ನಾಲಾ, ಡಾ. ಬಿ.ಎಸ್. ಕನಮಡಿ, ಡಾ. ವೆಂಕಟೇಶ ವಾಲಿಕಾರ, ಡಾ. ಶರಣಗೌಡ ಬಿರಾದಾರ, ಡಾ. ಧರಮಪ್ಪ ರಾಠೋಡ, ಡಾ. ತಪಶೆಟ್ಟಿ, ಡಾ. ರಾಮು ರಾಠೋಡ, ಡಾ. ಪ್ರವೀಣ ಸುರಪುರ ಇತರರಿದ್ದರು.


## Office of the District Collector, Solapur and Returning Officer,

**SPG Multi-State Cooperative Credit Society Ltd., Natepute, Plot No. 1011/5, Dahigaon, Tal. Malshiras, Dist. Solapur.**

### NOTICE OF ELECTION

**(ONLY FOR MEMBERS)**

(As per Multi-State Co-operative Societies Act, 2002 (Amendment 2023) and MSCS Rules 2002 (Amendment 2023)

Notice is hereby given that, as per Cooperative Election Authority, New Delhi, Order No. CEA-12011/515/2026 Dated 13thApril 2026, **Election is to be held for Board of Directors and Office Bearers of SPG Multi-State Cooperative Credit Society Ltd., Natepute, Plot No. 1011/5, Dahigaon, Tal. Malshiras, Dist. Solapur.,**

- The number and type of "Board of Directors" to be elected : **11** (General - 08, SC/ST- 01, Women – 02)
- The number and type of "Office Bearers" to be elected : **02** (Chairman - 01 and Vice- Chairman- 01)
- Office address of Returning Officer (RO) : **Office of the District Collector, Solapur, New Collector Office, Sat Rasta, Vijapur Road, Solapur-413003.**

**Election Schedule**

**Election programme for "Board of Directors"**

| Sl. No. | Particulars | Date | Time | Place |
|---|---|---|---|---|
| 1 | Publication of Provisional List of Members Delegates, Eligible to Vote | 02nd June, 2026 (Tuesday) | By Evening | Office of the RO Society Head office and It's all Branch Offices, Society Website. |
| 2 | Time Window for Raising Objection to the Provisional List | 3rd June, 2026 to 6th June, 2026 (Wednesday to Saturday) | 11:00 AM to 3:00 PM | RO Office. |
| 3 | Scrutiny of objection received to the Provisional List (if any) | 8th June, 2026 to 12th June, 2026 (Monday to Friday) | 11:00 AM to 3:00 PM | RO Office. |
| 4 | Publication of Final List of Members & Delegates, Eligible to Vote | 13th June, 2026 (Saturday) | By Evening | Office of the RO Society Head office and It's all Branch Offices, Society Website. |
| 5 | Issue and Filing of Nomination Form | 22nd June, 2026 to 25th June, 2026 (Monday to Thursday) | 11:00 AM to 3:00 PM | RO Office. |
| 6 | Publication of List of Nominations Received | 25th June, 2026 (Thursday) | By Evening | Office of the RO Society Head office and It's all Branch Offices, Society Website. |
| 7 | Scrutiny of Received Nomination Forms | 27th June, 2026 (Saturday) | 11:00 AM onwards | RO Office. |
| 8 | Publication of List of Valid Nominations | 27th June, 2026 (Saturday) | Immediately after scrutiny | Office of the RO Society Head office and It's all Branch Offices, Society Website. |
| 9 | Withdrawal of Nominations | 28th June, 2026 (Sunday) | 11:00 AM to 3:00 PM | RO Office. |
| 10 | Publication of Final List of Contesting Candidates | 28th June, 2026 (Sunday) | By Evening | Office of the RO Society Head office and It's all Branch Offices, Society Website. |
| 11 | Date of Polling, if Necessary | 12th July, 2026 (Sunday) — and all those who have entered polling station at 04 PM or before, should be allowed to cast vote | 8:00 AM to 04:00 PM | Place will be Announced later. |
| 12 | Counting of votes | 15th July, 2026 (Wednesday) | 8:00 AM Onwards | Place will be Announced later. |
| 13 | Declaration of Result of "Board of Directors" | After approval of Cooperative Election Authority, New Delhi on Format 19M | | |

**Election programme for "Office Bearer"**

| Sl. No. | Particulars | Date | Time | Place |
|---|---|---|---|---|
| 1 | Announcement of Election Schedule | 23rd July, 2026 (Thursday) | After Declaration of Result of Board of Directors Election | |
| | 1.Time window for filing nomination | | 09:00 AM to 11:30 AM | RO Office. |
| | 2.Scrutiny of nomination papers | | 12:30 PM to 02:00 PM | RO Office. |
| | 3.Time and date for withdrawal | | 2:00 PM to 04:00 PM | RO Office. |
| | 4.Display of list of the contesting candidate and schedule of election | | By Evening | Office of the RO Society Head office and It's all Branch Offices, Society Website. |
| 2 | Meeting of Newly Constituted Board and Publication of Valid Nominations, Polling (if required) | 24th July, 2026 (Friday) | 11:00 AM Onwards | Place will be Announced later. |
| 3 | Declaration of Result of Election of Office Bearers | On or before 31st July, 2026, After approval of Cooperative Election Authority, New Delhi on Format 19N | | |

1. MSCS Rule 19(1) and the relevant clauses of the Bye-laws of the SPG Multi-State Cooperative Credit Society Ltd. state that only members registered in the final voter list shall be eligible to vote in the said election.
2. The Provisional List of members will be available for inspection at the RO/ARO office, the registered office of the SPG Multi-State Cooperative Credit Society Ltd., all of its branch offices, and the Society's website.
3. A copy of the final voters list will be supplied to any member or delegate upon payment of the fee specified by the society's Board of Directors.
4. It is mandatory for the candidate, proposer, and seconder to be members of the SPG Multi-State Cooperative Credit Society Ltd., and their names must be included in the final voter list.
5. It is mandatory for the candidate, or a person authorized by them, or their nominee, to file a nomination form in the prescribed format—**'Form III'** for the Board of Directors and **'Form V'** for Office Bearers—with the Returning Officer or Assistant Returning Officer within the prescribed time limit.
6. To be eligible to contest elections for the Board of Directors and as an Office Bearer, a candidate must fulfill the criteria under Sections 29, 43, and 44 of the Multi-State Cooperative Societies Act, Rules 19J, 19K, and 19L of the MSCS Rules, and the bye-laws of the SPG Multi-State Cooperative Credit Society Ltd.
7. An election deposit of Rs. 2,000/- (Rs. 500/- for Scheduled Castes and Scheduled Tribes candidates) is mandatory, and the receipt for this deposit must be attached to the nomination paper.
8. A candidate filing a nomination form under a reserved category (SC/ST/NT/OBC) must attach a self-attested copy of their caste certificate to the nomination form.
9. A candidate, their nominee, or their authorized representative (authorized in writing by the candidate) may give a written notice of withdrawal of candidature to the Returning Officer or Assistant Returning Officer within the prescribed time.
10. All contesting candidates must submit the details of their election expenses to the RO/ARO as per the provisions of MSCS Rules 19(U), (V), (W), and (X), and strictly adhere to the code of conduct.

**Place :** Solapur
**Date :** 25 May, 2026

Seal

Sd/- **Karthikeyan S.** IAS
**Returning Officer**
SPG Multi-State Cooperative Credit Society Ltd.
And District Collector, Solapur.


### ರೈತ ಸಂಘ, ಹಸಿರು ಸೇನೆಯಿಂದ ಆಗ್ರಹ | ತಹಸೀಲ್ದಾರ್‌ಗೆ ಮನವಿ

# ಅಗತ್ಯ ಪ್ರಮಾಣದ ಯೂರಿಯಾ ಒದಗಿಸಿ

■ **ವಿಜಯವಾಣಿ ಸುದ್ದಿಜಾಲ** ಮುದ್ದೇಬಿಹಾಳ

ಕಳೆದ ವರ್ಷ ತಾಲೂಕಿನಲ್ಲಿ ಕಳಪೆ ಬಿತ್ತನೆ ಬೀಜಗಳ ಸರಬರಾಜಿನಿಂದಾಗಿ ರೈತರು ಅಪಾರ ನಷ್ಟ ಹಾಗೂ ತೊಂದರೆ ಅನುಭವಿಸಿದ್ದು, ಈ ವರ್ಷ ಅಂತಹ ಯಾವುದೇ ಲೋಪದೋಷಗಳು ಮರುಕಳಿಸದಂತೆ ಕೃಷಿ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ (ವಾಸುದೇವ ಮೇಟಿ ಬಣ) ವತಿಯಿಂದ ಸೋಮವಾರ ತಹಸೀಲ್ದಾರ್ ಕೀರ್ತಿ ಚಾಲಕ ಹಾಗೂ ಕೃಷಿ ಇಲಾಖೆ ಅಧಿಕಾರಿಗೆ ಮನವಿ ಸಲ್ಲಿಸಲಾಯಿತು.

ಮನವಿ ಸಲ್ಲಿಸಿದ ಬಳಿಕ ಸಂಘಟನೆಯ ರಾಜ್ಯ ಸಂಘಟನಾ ಕಾರ್ಯದರ್ಶಿ ಬಸನಗೌಡ ಬಿ. ಪಾಟೀಲ ಮಾತನಾಡಿ, ತಾಲೂಕಿನ ರೈತರು ಮುಂಗಾರು ಬಿತ್ತನೆಗಾಗಿ ಭೂಮಿ ಸಿದ್ಧಪಡಿಸಿಕೊಳ್ಳುತ್ತಿದ್ದಾರೆ. ಕಳೆದ ಬಾರಿ ಕಳಪೆ ಬೀಜಗಳಿಂದ ರೈತರು ಕಂಗಾಲಾಗಿದ್ದರು. ಈ ಬಾರಿ ಗುಣಮಟ್ಟದ ಬೀಜ ಮತ್ತು ಗೊಬ್ಬರವನ್ನು ಸಕಾಲಕ್ಕೆ ಒದಗಿಸಬೇಕು. ತಾಲೂಕಿನ ಪ್ರತಿಯೊಂದು ಬೀಜ ಹಾಗೂ ಗೊಬ್ಬರ ಮಾರಾಟ ಮಳಿಗೆಗಳಲ್ಲಿ ಕೃಷಿ ಇಲಾಖೆಯು ಕಟ್ಟುನಿಟ್ಟಾಗಿ ಗುಣನಿಯಂತ್ರಣ ಪ್ರಮಾಣಪತ್ರಗಳನ್ನು ಪರಿಶೀಲಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯ ಸರ್ಕಾರವು ಎಫ್.ಐ.ಡಿ ಮೂಲಕ ಪ್ರತಿ ಎಕರೆಗೆ ಕೇವಲ 1 ಕ್ವಿಂಟಾಲ್ ಮಾತ್ರ ಯೂರಿಯಾ ಗೊಬ್ಬರ ನೀಡಲು ಆದೇಶಿಸಿದ್ದು, ಇದರಿಂದ ರೈತರಿಗೆ ತೀವ್ರ ತೊಂದರೆಯಾಗಲಿದೆ. ಸರ್ಕಾರ ತಕ್ಷಣವೇ ಈ ಆದೇಶವನ್ನು ಹಿಂಪಡೆದು, ರೈತರಿಗೆ ಅಗತ್ಯವಿರುವಷ್ಟು ಪ್ರಮಾಣದಲ್ಲಿ ಯೂರಿಯಾ ಒದಗಿಸಬೇಕು ಎಂದು ಆಗ್ರಹಿಸಿದರು.



ಮುದ್ದೇಬಿಹಾಳ ತಾಲೂಕಿನಲ್ಲಿ ಗುಣಮಟ್ಟದ ಬಿತ್ತನೆ ಬೀಜ ಹಾಗೂ ಅಗತ್ಯ ಪ್ರಮಾಣದ ಯೂರಿಯಾ ಗೊಬ್ಬರ ಪೂರೈಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಪದಾಧಿಕಾರಿಗಳು ತಹಸೀಲ್ದಾರ್ ಚಾಲಕಗೆ ಮನವಿ ಸಲ್ಲಿಸಿದರು. ಅಯ್ಯಪ್ಪ ಬಿದರಕುಂದಿ, ಪ್ರಧಾನ ಕಾರ್ಯದರ್ಶಿ ವೈ. ಎಲ್. ಬಿರಾದಾರ, ಸಂಘಟನಾ ಕಾರ್ಯದರ್ಶಿ ಹುಲ್ಲಗಪ್ಪಗೌಡ ಬಿರಾದಾರ ಮತ್ತಿತರರಿದ್ದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗುರುಸಂಗಪ್ಪಗೌಡ ಹಂಡರಗಲ್ಲ ಮಾತನಾಡಿ, ಕೆಲವು ಗೊಬ್ಬರ ಮತ್ತು ಔಷಧ ಅಂಗಡಿ ಮಾಲೀಕರು ಸರ್ಕಾರ ನಿಗದಿಪಡಿಸಿದ ದರಕ್ಕಿಂತ ಹೆಚ್ಚಿನ ಬೆಲೆ ವಸೂಲಿ ಮಾಡುತ್ತಿದ್ದಾರೆ ಎಂದು ರೈತರು ನಮ್ಮ ಗಮನಕ್ಕೆ ತಂದಿದ್ದಾರೆ. ಕೃಷಿ ಇಲಾಖೆಯು ಇಂತಹ ದಂಧೆಗೆ ತಕ್ಷಣವೇ ಬ್ರೇಕ್ ಹಾಕಬೇಕು ಎಂದರು.

ರೈತರ ಮನವಿ ಸ್ವೀಕರಿಸಿ ಮಾತನಾಡಿದ ಕೃಷಿ ಇಲಾಖೆಯ ತಾಂತ್ರಿಕ ಕೃಷಿ ಅಧಿಕಾರಿ ರಾಜೇಶ್ವರಿ ನಾಡಗೌಡ, ತಾಲೂಕಿನಲ್ಲಿ ಸದ್ಯ ಬಿತ್ತನೆ ಬೀಜ ಹಾಗೂ ಗೊಬ್ಬರದ ಯಾವುದೇ ಕೊರತೆಯಿಲ್ಲ, ಪೂರಕ ದಾಸ್ತಾನು ಲಭ್ಯವಿದೆ. ಸರ್ಕಾರದ ಆದೇಶದಂತೆ ಸದ್ಯ ಎಫ್.ಐ.ಡಿ ಮೂಲಕ ಯೂರಿಯಾ ವಿತರಿಸಲಾಗುತ್ತಿದೆ. ಯಾವುದೇ ಅಂಗಡಿಯವರು ನಿಗದಿತ ದರಕ್ಕಿಂತ ಹೆಚ್ಚಿನ ಹಣ ವಸೂಲಿ ಮಾಡುತ್ತಿರುವುದು ಕಂಡು ಬಂದಲ್ಲಿ ಅಥವಾ ರೈತರು ಈ ಬಗ್ಗೆ ಲಿಖಿತ ದೂರು ನೀಡಿದರೆ, ಅಂತಹ ಮಳಿಗೆಗಳ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಭರವಸೆ ನೀಡಿದರು.


ತಾಲೂಕು ಅಧ್ಯಕ್ಷ ಅಯ್ಯಪ್ಪ ಬಿದರಕುಂದಿ, ಪ್ರಧಾನ ಕಾರ್ಯದರ್ಶಿ ವೈ. ಎಲ್. ಬಿರಾದಾರ, ಸಂಘಟನಾ ಕಾರ್ಯದರ್ಶಿ ಹುಲ್ಲಗಪ್ಪಗೌಡ ಬಿರಾದಾರ, ಮುಖಂಡರಾದ ಬಸನಗೌಡ ಬ್ಯಾಲ್ಯಾಳ, ಮಲ್ಲಿಕಾರ್ಜುನ ಬಿಸಲದಿನ್ನಿ, ಹಣಮಂತ ಹಡಲಗೇರಿ, ಅಡಿವೆಪ್ಪ ಬಿರಾದಾರ, ಸಂಗು ಯರಝರಿ ಮತ್ತಿತರರಿದ್ದರು.

## ಮಕ್ಕಳ ಶೈಕ್ಷಣಿಕ ಹೆಜ್ಜೆಗೆ ಬೇಸಿಗೆ ಶಿಬಿರ ಮುನ್ನುಡಿ

**ಸಿಂದಗಿ:** ಪ್ರತಿ ಶೈಕ್ಷಣಿಕ ವರ್ಷದ ಅಂತ್ಯದಿಂದ ಆರಂಭಗೊಳ್ಳುವ ಬೇಸಿಗೆ ಶಿಬಿರಗಳು ಮಕ್ಕಳ ಹೊಸ ಶೈಕ್ಷಣಿಕ ಹೆಜ್ಜೆಗೆ ಮುನ್ನುಡಿಯಾಗಿದೆ ಎಂದು ಭೀಮಾ ಶಿಕ್ಷಣ ಸಂಸ್ಥೆ ಚೇರ್ಮನ್ ವಿಠ್ಠಲ ಕೊಳ್ಳೂರ ಹೇಳಿದರು.

ನಗರದ ಜೇವರ್ಗಿ ರಸ್ತೆ ಬೈಪಾಸ್ ಬಳಿ ಭೀಮಾ ಯೂನಿವರ್ಸಲ್ ಸೆಂಟ್ರಲ್ ಸ್ಕೂಲ್‌ನಲ್ಲಿ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಿಬಿರದಲ್ಲಿ ಮಕ್ಕಳಿಗೆ ವಿವಿಧ ಚಟುವಟಿಕೆ ನೀಡಿ, ಅವರಲ್ಲಿನ ಸೃಜನಶೀಲ ಕಲೆ ಅನಾವರಣಗೊಳಿಸುವ ಮೂಲಕ, ಪ್ರತಿಭೆ ಪ್ರೋತ್ಸಾಹಿಸಿ, ಬದುಕಿನ ಶಿಸ್ತು, ಸಂಸ್ಕಾರ ಮತ್ತು ಶಿಕ್ಷಣ ಪಾಠ ನೀಡಿ ಅವರನ್ನು ಸುಸಂಸ್ಕೃತರನ್ನಾಗಿಸಲಾಗುತ್ತದೆ ಎಂದರು. ನ್ಯಾಯವಾದಿ ಶಿರಣಪ್ಪ ಸಿಂಗಾಡಿ, ಭೀಮಾ ಸಂಸ್ಥೆಯಲ್ಲಿ ಶಿಕ್ಷಣ ಪಡೆದ ಮಕ್ಕಳು, ಇಂಜಿನಿಯರಿಂಗ್, ವೈದ್ಯಕೀಯ ವೃತ್ತಿ ಸೇರಿ ವಿವಿಧ ಸರ್ಕಾರಿ ಇಲಾಖೆಗಳಲ್ಲಿ ತಮ್ಮದೇ ಆದ ಛಾಪು ಮೂಡಿಸುತ್ತಿದ್ದಾರೆ ಎಂದು ಹೆಮ್ಮೆ ವ್ಯಕ್ತಪಡಿಸಿದರು.



ಸಿಂದಗಿ ನಗರದ ಭೀಮಾ ಯೂನಿವರ್ಸಲ್ ಸೆಂಟ್ರಲ್ ಸ್ಕೂಲ್‌ನಲ್ಲಿ ನಡೆದ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭವನ್ನು ವಿಠ್ಠಲ ಕೊಳ್ಳೂರ ಉದ್ಘಾಟಿಸಿದರು. ಜಿ.ಕೆ. ಪಡಗಾನೂರ, ಶರಣು ಮಾವೂರ, ಭೀಮಾಶಂಕರ ತಾರಾಪುರ ಇತರರಿದ್ದರು.

# ಆಯುರ್ವೇದ ಸಂಶೋಧನೆಯಲ್ಲಿ ಎಐ ಬಳಕೆ ಪೂರಕ

**ವಿಜಯಪುರ:** ಆಯುರ್ವೇದ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಕಾಲಾನುಸಾರ ತಂತ್ರಜ್ಞಾನದಲ್ಲಿ ತಮ್ಮನ್ನು ತಾವು ನವೀಕರಿಸಿಕೊಳ್ಳುವ ಮೂಲಕ ಆಯುರ್ವೇದದ ಪ್ರಾಚೀನ ವಿಜ್ಞಾನವನ್ನು ಇಂದಿನ ಮತ್ತು ಭವಿಷ್ಯದ ಪೀಳಿಗೆಗಳಿಗೆ ಸಮರ್ಪಕವಾಗಿ ತಲುಪಿಸಲು ಮುಂದಾಗಬೇಕು ಎಂದು ಆರ್‌ಕೆಎಂ ಶಿಕ್ಷಣ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಶಂಭುಲಿಂಗ ಕರ್ಪೂರಮಠ ಹೇಳಿದರು.

ನಗರದ ಆರ್‌ಕೆಎಂ ಆಯುರ್ವೇದ ಮಹಾವಿದ್ಯಾಲಯದ ಚರಕ ಸಭಾಂಗಣದಲ್ಲಿ ಐಕ್ಯೂಎಸಿ ಸಹಯೋಗದೊಂದಿಗೆ ಸೋಮವಾರ ಹಮ್ಮಿಕೊಂಡಿದ್ದ 'ಶಿಕ್ಷಣ ಮತ್ತು ಸಂಶೋಧನೆಯಲ್ಲಿ ಉದಯೋನ್ಮುಖ ಎಐ ಸಾಧನಗಳು' ಎಂಬ ವಿಷಯದ ಕುರಿತ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಆಯುರ್ವೇದ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ (ಎಐ)ಯ ಅಗತ್ಯತೆ ಕುರಿತು ವಿವರಿಸಿ, ಭಾರತದ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಆಯುರ್ವೇದವನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯುವ ದೃಷ್ಟಿಕೋನವನ್ನು ಉಲ್ಲೇಖಿಸಿದರು.



ವಿಜಯಪುರದ ಆರ್‌ಕೆಎಂ ಆಯುರ್ವೇದ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಶಿಕ್ಷಣ ಮತ್ತು ಸಂಶೋಧನೆಯಲ್ಲಿ ಉದಯೋನ್ಮುಖ ಎಐ ಸಾಧನಗಳು ವಿಷಯದ ಕುರಿತ ಕಾರ್ಯಾಗಾರವನ್ನು ಗಣ್ಯರು ಉದ್ಘಾಟಿಸಿದರು. ಶಂಭುಲಿಂಗ ಕರ್ಪೂರಮಠ, ಪ್ರತಾಪ ಸೋಲಾಪುರ, ಪ್ರದೀಪ ಮಾಳಜಿ ಮತ್ತಿತರರಿದ್ದಾರೆ.

ಅತಿಥಿ ಉಪನ್ಯಾಸಕ ಪ್ರತಾಪ ಸೋಲಾಪುರ ಸಂಶೋಧನಾ ಚಟುವಟಿಕೆಗಳಲ್ಲಿ, ವಿಶೇಷವಾಗಿ ಆಯುರ್ವೇದ ಸಂಶೋಧನೆಯಲ್ಲಿ ಎಐ ಉಪಯೋಗಿಸುವ ವಿಧಾನಗಳ ಕುರಿತು ಉಪನ್ಯಾಸ ನೀಡಿದರು. ಅಲ್ಲದೆ, ಸಂಶೋಧನಾ ಲೇಖನ ರಚನೆ, ಸಾಹಿತ್ಯ ಪರಿಶೀಲನೆ, ಮಾಹಿತಿ ವಿಶ್ಲೇಷಣೆ ಮತ್ತು ನವೀನ ಸಂಶೋಧನಾ ವಿಧಾನಗಳಲ್ಲಿ ಎಐ ಸಾಧನಗಳ ಉಪಯೋಗದ ಬಗ್ಗೆ ವಿವರಿಸಿದರು.

ಅತಿಥಿ ಉಪನ್ಯಾಸಕ ಪ್ರದೀಪ ಮಾಳಜಿ ಬೋಧನಾ ವಿಧಾನಗಳಲ್ಲಿ ಎಐ ಉಪಯೋಗಿಸುವ ಬಗ್ಗೆ ಸಿಬ್ಬಂದಿಗೆ ಮಾರ್ಗದರ್ಶನ ನೀಡಿದರು. ವಿದ್ಯಾರ್ಥಿಗಳಿಗೆ ವಿಷಯಗಳನ್ನು ಸುಲಭವಾಗಿ ಅರ್ಥಮಾಡಿಕೊಡಲು ಹಾಗೂ ಅವರಲ್ಲಿ ಕಲಿಕೆಯ ಆಸಕ್ತಿ ಹೆಚ್ಚಿಸಲು ಎಐ ಸಾಧನಗಳ ಬಳಕೆ ಹೇಗೆ ಸಹಕಾರಿ ಆಗುತ್ತದೆ ಎಂಬುವುದನ್ನು ವಿವರಿಸಿದರು. ಪರಂಪರಾಗತ ಆಯುರ್ವೇದ ಶಿಕ್ಷಣದೊಂದಿಗೆ ಆಧುನಿಕ ತಂತ್ರಜ್ಞಾನವನ್ನು ಸಂಯೋಜಿಸುವ ಸಂಸ್ಥೆಯ ಪ್ರಯತ್ನವನ್ನು ಭಾಗವಹಿಸಿದವರು ಪ್ರಶಂಸಿಸಿದರು. ಉಪ ಪ್ರಾಚಾರ್ಯ ಸಿದ್ದು ಹಿರೇಮಠ ವೇದಿಕೆಯಲ್ಲಿದ್ದರು. ಶೈಕ್ಷಣಿಕ ಡೀನ್ ಮೃನಾಲ ರುದ್ರಗೌಡರ ನಿರೂಪಿಸಿದರು.

**ವಾಹನ ಸವಾರರ ಪರದಾಟ** | **ಪಾದಚಾರಿಗಳ ಹಿಡಿಶಾಪ | ಸಾರ್ವಜನಿಕರ ಆಕ್ರೋಶ**

# ಯಮಸ್ವರೂಪಿ ರೇವತಗಾಂವ-ಶಿರಾಡೋಣ ರಸ್ತೆ

■ **ವಿಜಯವಾಣಿ ಸುದ್ದಿಜಾಲ** ರೇವತಗಾಂವ

ಶಿರಾಡೋಣ ಮಾರ್ಗವಾಗಿ ರೇವತಗಾಂವ, ಉಮರಜ, ದಸೂರ ಹಾಗೂ ಮಹಾರಾಷ್ಟ್ರದ ಇತರ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯು ಸಂಪೂರ್ಣವಾಗಿ ಹದಗೆಟ್ಟಿದ್ದು, ವಾಹನ ಸವಾರರು ಸಂಚರಿಸಲು ಹರಸಾಹಸ ಪಡುವಂತಾಗಿದೆ.

ರಸ್ತೆಯು ತಗ್ಗು, ದಿನ್ನೆಗಳಿಂದ ಕೂಡಿದ್ದು, ಮಳೆಯಿಂದ ರಸ್ತೆಯಲ್ಲಿ ನೀರು ಒಂದೇ ಕಡೆ ಶೇಖರಣೆಯಾದಾಗ ತಗ್ಗು, ಗುಂಡಿಗಳು ಕಾಣದೇ ದ್ವಿಚಕ್ರ ವಾಹನ ಸವಾರರು ಸ್ವಲ್ಪ ಎಚ್ಚರ ತಪ್ಪಿದರೂ ಜಾರಿ ಬೀಳುವುದು ಗ್ಯಾರಂಟಿ.

ಸುಮಾರು ವರ್ಷಗಳಿಂದ ಈ ರಸ್ತೆ ಹಾಳಾಗಿದ್ದರೂ ಜನಪ್ರತಿನಿಧಿಗಳು ಹಾಗೂ ಲೋಕೋಪಯೋಗಿ ಇಲಾಖೆ ಮಾತ್ರ ಕಂಡು ಕಾಣದಂತೆ ಮೌನ ವಹಿಸಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

**ಅಯ್ಯೋ**
**ಪ್ರಾಬ್ಲಂ ಕಣ್ರೀ...**
**ನಮ್ಮ ವಿಳಾಸ:** ವಿಜಯವಾಣಿ ಪತ್ರಿಕೆ ಕಚೇರಿ, ಮನಗೂಳಿ ರಸ್ತೆ, ಮರಾಠಿ ವಿದ್ಯಾಲಯ ಎದುರು, ವಿಜಯಪುರ-586101
email: vvbijapurdesk@gmail.com
**ದೂ: 88844 11686**
(ವರದಿಗಾರರ ವಿಭಾಗ)



ರೇವತಗಾಂವ-ಶಿರಾಡೋಣ ರಸ್ತೆಯು ಸಂಪೂರ್ಣ ಹದಗೆಟ್ಟಿರುವುದು.

ವಾಹನಗಳು ಸಂಚರಿಸುವಾಗ ಜಲ್ಲಿ ಕಲ್ಲುಗಳು ವಾಹನಗಳ ಟೈರ್‌ಗಳಿಂದ ಸಿಡಿದು ಪಾದಾಚಾರಿಗಳಿಗೆ ಬೀಳುತ್ತಿವೆ. ಇದರಿಂದ ಪಾದಚಾರಿಗಳು ಬೇಸತ್ತು ಹೋಗಿದ್ದಾರೆ. ಈ ಮಾರ್ಗದಲ್ಲಿ ಸಂಚಾರಿಸುವ ಸಾರ್ವಜನಿಕರು, ವಿದ್ಯಾರ್ಥಿಗಳು ಪ್ರತಿದಿನ ಜನ ಹಿಡಿಶಾಪ ಹಾಕುತ್ತಿದ್ದಾರೆ.

ಒಟ್ಟಿನಲ್ಲಿ ರೇವತಗಾಂವ ಶಿರಾಡೋಣ ರಸ್ತೆ ಸಂಪೂರ್ಣವಾಗಿ ಹದಗೆಟ್ಟಿದ್ದು, ವಾಹನ ಸವಾರರಿಗೆ ಯಮ ಸ್ವರೂಪಿ ರಸ್ತೆಯಾಗಿ ಮಾರ್ಪಟ್ಟಿದೆ. ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಎಚ್ಚೆತ್ತುಕೊಂಡು ಹದಗೆಟ್ಟ ರಸ್ತೆಗೆ ಮುಕ್ತಿ ಕಲ್ಪಿಸುತ್ತಾರಾ? ಎಂಬುದನ್ನು ಎಂದು ಕಾದು ನೋಡಬೇಕಾಗಿದೆ.

> ಸುಮಾರು ಹನ್ನೆರೆಡು ವರ್ಷಗಳಿಂದ ರಸ್ತೆಯು ಅಭಿವೃದ್ಧಿ ಭಾಗ್ಯವನ್ನೇ ಕಂಡಿಲ್ಲ. ರಸ್ತೆ ಸಂಪೂರ್ಣ ಹದಗೆಟ್ಟಿದೆ. ಮಳೆಗಾಲದಲ್ಲಿ ಈ ರಸ್ತೆಯಲ್ಲಿ ಸಂಚರಿಸಲು ಸಾಕಷ್ಟು ಕಷ್ಟವಾಗುತ್ತದೆ. ಅಧಿಕಾರಿಗಳಾಗಲಿ ಅಥವಾ ಜನ ಪ್ರತಿನಿಧಿಗಳಾಗಲಿ ಈ ಬಗ್ಗೆ ತಲೆಕೆಡಿಸಿಕೊಳ್ಳುತ್ತಿಲ್ಲ.
> | **ರೇವಣಸಿದ್ಧ ಜಾಬಗೊಂಡೆ,** ಗ್ರಾಪಂ ಸದಸ್ಯ ರೇವತಗಾಂವ.

> ನಾನು ಗ್ರಾಮೀಣ ಅಭಿವೃದ್ಧಿಗೆ ಮೊದಲ ಆದ್ಯತೆ ನೀಡುತ್ತಿದ್ದೇನೆ. ರಸ್ತೆ ಕಾಮಗಾರಿಗೆ ಐದು ಕೋಟಿ ರೂ. ಬಿಡುಗಡೆಯಾಗಿದ್ದು, ಕಾಮಗಾರಿ ಟೆಂಡರ್ ಹಂತದಲ್ಲಿದೆ. ಆದಷ್ಟು ಬೇಗನೆ ಹದಗೆಟ್ಟ ರಸ್ತೆ ಡಾಂಬರೀಕರಣ ಮಾಡಲಾಗುವುದು.
> | **ವಿಠ್ಠಲ ಕಟಕಧೋಂಡ,** ಶಾಸಕ ನಾಗಠಾಣ ಮತಕ್ಷೇತ್ರ .